1	2	3	4
16	ರೇಣುಕಾರಾದ್ಯಾ	ಪ್ರಥಮ ದರ್ಜೆ ಲೆಕ್ಕ ಸಹಾಯಕ	ಸಹಾಯಕ ವ್ಯವಸ್ಥಾಪಕರು
17	ಬಿ.ಎಸ್. ವೆಂಕಟೇಶ್	ಪ್ರಥಮ ದರ್ಜೆ ಲೆಕ್ಕ ಸಹಾಯಕ	ಸಹಾಯಕ ವ್ಯವಸ್ಥಾಪಕರು
18	ಚಂದ್ರಶೇಖರ್. ವಿ	ಎರಡನೇ ದರ್ಜೆ ಸರ್ವೇಯರ್	ಕಾರ್ಯನಿರ್ವಾಹಕರು

ಶಾಲಾ ಕಾಲೇಜುಗಳಿಂದ ಹಣ ಸಂಗ್ರಹಣೆ ಮಾಡಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಧನಸಹಾಯ

1505(1574) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಶಾಲಾ ಕಾಲೇಜುಗಳಿಂದ ಹಣ ಸಂಗ್ರಣ ಮಾಡಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಧನ ಸಹಾಯ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೆ;

ಆ. ಶಾಲಾ ಕಾಲೇಜುಗಳಿಂದ ಯಾವ ಪ್ರಮಾಣದಲ್ಲಿ ಹಣ ಸಂಗ್ರದ ಮಾಡಲಾಗುವುದು;

ಇ. ಸರಕಾರಿ ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳ ಕುಟುಂಬಗಳು ಆರ್ಥಿಕವಾಗಿ ಬಲಿಷ್ಟರಾಗಿರುವುದಿಲ್ಲ; ವಿದ್ಯಾರ್ಥಿಗಳ ಫೀಜ್ ಕಟ್ಟಲು ಪರದಾಡುವ ಇವರಿಂದ ಸರ್ಕಾರವು ಹೆಚ್ಚುವರಿ ಹಣ ಸಂಗ್ರಹಿಸುವುದನ್ನು ಯಾವ ರೀತಿ ಸಮರ್ಥಿಸಿಕೊಳ್ಳಲಿದೆ?

ಪ್ರೋ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಡ ಶಿಕ್ಷಣ ರಾಜ್ಯ ಸಚಿವರು)

ಅ. ಇಲ್ಲ

ಆ. ಇಲ್ಲ

ಇ. ಉದ್ಭವಿಸುವುದಿಲ್ಲ

ತುರುವೇಕೆರೆ ತಾಲ್ಲೂಕಿನಲ್ಲಿ ರಸ್ತೆ ದುರಸ್ತಿ

1506(1997) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ತುರುವೇಕೆರೆ ತಾಲ್ಲೂಕು ಯಲ್ಲದಬಾಗಿ ಗ್ರಾಮದಿಂದ ಸಂಪಿಗೆ ರೈಲ್ವೆ ಸ್ಟೇಷನ್ (ಮಲ್ಲೇನಹಳ್ಳಿ) ತನಕ ಗ್ರಾಮೀಣ ರಸ್ತೆ ತುಂಬಾ ಹಾಳಾಗಿ ರೈತರು ಓಡಾಡಲಿಕ್ಕೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

2. ಹಾಗಿದ್ದಲ್ಲಿ, ಇದುವರೆವಿಗೂ ಈ ರಸ್ತೆ ಮಾಡದಿರಲು ಕಾರಣವೇನು;

3. ರೈತರಿಗೆ ಅನುಕೂಲ ಕಲ್ಪಿಸಲು ಸರ್ಕಾರ ಈ ವರ್ಷದ ಆಯವ್ಯಯದಲ್ಲಿ ದುರಸ್ತಿ ಮಾಡಿಸಲಾಗುವುದೇ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1. ಬಂದಿದೆ. ಸದರಿ ರಸ್ತೆಯು 2.2 ಕಿ.ಮೀ. ಉದ್ದವಿದ್ದು ಕಚ್ಚಾ ರಸ್ತೆಯಾಗಿದೆ. 0.5 ಕಿ.ಮೀ. ರಸ್ತೆಯು ರೈಲ್ವೆ ಮಾರ್ಗದ ಸರಹದ್ದಿನಲ್ಲಿದ್ದು, ಬಾಕಿ 1.7 ಕಿ.ಮೀ. ರಸ್ತೆಯು ತೋಟಗಳ ಮಧ್ಯೆ ಹಾದು ಹೋಗುತ್ತಿದೆ. ಈ ರಸ್ತೆಯಲ್ಲಿ ಹಾಲಿ ದ್ವಿಚಕ್ರವಾಹನ ಮತ್ತು ರೈತರು ಓಡಾಡಬಹುದಾಗಿರುತ್ತದೆ.

2. ರೈಲ್ವೆ ಮಾರ್ಗದ ಸರಹದ್ದಿನಲ್ಲಿದ್ದು, ತೋಟಗಳ ಮಧ್ಯೆ ಹಾದು ಹೋಗುತ್ತಿರುವುದರಿಂದ ರಸ್ತೆ ಅಭಿವೃದ್ಧಿ ಕೈಗೊಳ್ಳಲಾಗಿಲ್ಲ.

3. ಈ ರಸ್ತೆಯ ಅಭಿವೃದ್ಧಿಗೆ ರೂ. 20.00 ಲಕ್ಷಗಳ ಅನುದಾನ ಅವಶ್ಯಕತೆಯಿದ್ದು ಈ ಬಗ್ಗೆ ಪರಿಶೀಲಿಸಲಾಗುವುದು.

ತುರುವೇಕೆರೆ ತಾಲ್ಲೂಕಿನಲ್ಲಿ ನಬಾರ್ಡ್ ರಸ್ತೆ ಕಾಮಗಾರಿ ಕುರಿತವಾಗಿರುವುದು

1507(1999) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ತುರುವೇಕೆರೆ ತಾಲ್ಲೂಕಿನ ಕಳೆದ ಎರಡು ವರ್ಷದಿಂದ ನಬಾರ್ಡ್ ರಸ್ತೆ (ಹುಲಿಕಲ್ ಮಾರ್ಗ) ಕಾಮಗಾರಿ ಕುಂಠಿತವಾಗಲು ಕಾರಣವೇನು;

2. ಕಾಮಗಾರಿ ಪ್ರಾರಂಭ ಮಾಡಲು ಇರುವ ತೊಂದರೆಯೇನು; ಯಾವಾಗ ಟೆಂಡರ್ ಕರೆಯಲಾಗುವುದು;

3. ಈ ವರ್ಷದ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳಿಸಲಾಗುವುದೆ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

1. ತುರುವೇಕೆರೆ ತಾಲ್ಲೂಕು, ಹುಲಿಕಲ್ ಮಾರ್ಗದ ಕಾಮಗಾರಿಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ತೆಗೆದುಕೊಂಡಿರುವುದಿಲ್ಲ. ಅರಮಲ್ಲೇನಹಳ್ಳಿಯಿಂದ ಮುದ್ದನಹಳ್ಳಿಗೆ ಹುಲಿಕಲ್ ಮತ್ತು ಕಂತೂರು ಮಾರ್ಗವಾಗಿ ಲೋಕೋಪಯೋಗಿ ಇಲಾಖೆಯಿಂದ ನಬಾರ್ಡ್ ಯೋಜನೆಯಡಿ ರೂ. 20.00 ಲಕ್ಷ ಅಂದಾಜು ಮೊತ್ತದಲ್ಲಿ ಕಾಮಗಾರಿಯನ್ನು ತೆಗೆದುಕೊಂಡು ಪೂರ್ಣಗೊಳಿಸಲಾಗಿದೆ.

2. ಉದ್ಭವಿಸುವುದಿಲ್ಲ.

3. ಉದ್ಭವಿಸುವುದಿಲ್ಲ

ತುರುವೇಕೆರೆ ಆಸ್ಪತ್ರೆಯಲ್ಲಿ ಸೌಲಭ್ಯಗಳು

1508(1999) ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ಅಣ್ಣಯ್ಯ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ತುರುವೇಕೆರೆಯಲ್ಲಿ 30 ಹಾಸಿಗೆಯುಳ್ಳ ಆಸ್ಪತ್ರೆ ಯಾವಾಗ ಪ್ರಾರಂಭವಾಯಿತು?